REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2024-2026
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ
ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ಕನ್ನಡ ವಾರಪತ್ರಿಕೆ

ಸಂಪುಟ : 33 । ಸಂಚಿಕೆ : 26 । 30 ಸೆಪ್ಟೆಂಬರ್ 2026 । ಬುಧವಾರ । ಪುಟಗಳು : 8 । ಬೆಲೆ : 2/-

ಅಕ್ಟೋಬರ್ 1 ರಿಂದ ಕೆಲ ಹೊಸ ನಿಯಮಗಳು ಜಾರಿಗೆ

ಮುಂಬೈ : ಅಕ್ಟೋಬರ್ 1 ರಿಂದ ದೇಶದಾದ್ಯಂತ ಹಣಕಾಸು, ಬ್ಯಾಂಕಿಂಗ್ ಸೇವೆಗಳಿಗೆ ಸಂಬಂಧಿಸಿದಂತೆ ಪ್ರಮುಖ ಬದಲಾವಣೆಗಳು ಜಾರಿಗೆ ಬರುತ್ತಿವೆ. ಜನಸಾಮಾನ್ಯರ ದೈನಂದಿನ ಬಜೆಟ್ ಮೇಲೆ ನೇರ ಪರಿಣಾಮ ಬೀರಲಿರುವ ಈ ಹೊಸ ನಿಯಮಗಳ ಸಂಪೂರ್ಣ ವರದಿ ಇಲ್ಲಿದೆ.

ಬ್ಯಾಂಕ್ ಫಿಕ್ಸೆಡ್ ಡೆಪಾಸಿಟ್ ನಿಯಮಗಳು : ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಮಾರ್ಗಸೂಚಿಗಳ ಅನ್ವಯ, ಅಕ್ಟೋಬರ್ 1 ರಿಂದ ವಿವಿಧ ಬ್ಯಾಂಕುಗಳ ಸ್ಥಿರ ಠೇವಣಿ ನಿಯಮಗಳಲ್ಲಿ ಬದಲಾವಣೆಯಾಗುತ್ತಿದೆ. ಪ್ರಮುಖವಾಗಿ ಹಿರಿಯ ನಾಗರಿಕರ ಎಫ್‌ಡಿ ಮೇಲಿನ ವಿಶೇಷ ಬಡ್ಡಿದರಗಳ ಅವಧಿ ಕೊನೆಗೊಳ್ಳುವ ಸಾಧ್ಯತೆ ಇದೆ.

ಅವಧಿಗೆ ಮುನ್ನ ಕ್ಲೋಸ್ ಮಾಡುವುದು : ಎಫ್‌ಡಿಯನ್ನು ಅವಧಿಗಿಂತ ಮುನ್ನವೇ ಹಿಂಪಡೆಯುವಾಗ ವಿಧಿಸಲಾಗುವ ದಂಡದ ಶುಲ್ಕ ಮತ್ತು ನಿಯಮಗಳನ್ನು ಬ್ಯಾಂಕುಗಳು ಹೆಚ್ಚು ಕಠಿಣಗೊಳಿಸುತ್ತಿವೆ.

UPI ಪಾವತಿ ಎಚ್ಚರಿಕೆ ಸಂದೇಶ : ನೀವು ಯುಪಿಐ ಮೂಲಕ ಅಪರಿಚಿತ ಅಥವಾ ಅನುಮಾನಾಸ್ಪದ ಖಾತೆಗಳಿಗೆ ಹಣ ವರ್ಗಾವಣೆ ಮಾಡುವಾಗ, ಸಿಸ್ಟಮ್ ಸ್ವಯಂಚಾಲಿತವಾಗಿ ವಂಚನೆಯ ಎಚ್ಚರಿಕೆ ಸಂದೇಶಗಳನ್ನು (Fraud Alerts) ಪರದೆಯ ಮೇಲೆ ತೋರಿಸುತ್ತದೆ.

ಮರ್ಚೆಂಟ್ ಯುಪಿಐ ಶುಲ್ಕ (MDR Charges) : ಅಕ್ಟೋಬರ್ 15 ರಿಂದ ಅನ್ವಯವಾಗುವಂತೆ, ರೂ.2,000 ಕ್ಕಿಂತ ಹೆಚ್ಚಿನ ನಿರ್ದಿಷ್ಟ ಮರ್ಚೆಂಟ್ (P2M) ಯುಪಿಐ ವಹಿವಾಟುಗಳಿಗೆ ಶೇ.0.4ರಷ್ಟು ಎಂಡಿಆರ್ ಶುಲ್ಕ ಅನ್ವಯವಾಗಲಿದೆ.

ಗಮನಿಸಿ : ಇದು ಕೇವಲ ವ್ಯಾಪಾರಿಗಳಿಗೆ ಅನ್ವಯವಾಗಲಿದ್ದು, ಸಾಮಾನ್ಯ ಗ್ರಾಹಕರಿಗೆ ಎಂದಿನಂತೆ ಯುಪಿಐ ಪಾವತಿ ಉಚಿತವಾಗಿರುತ್ತದೆ.

ಎಸ್‌ಬಿಐ ಬ್ಯಾಂಕ್ ಎಟಿಎಂ ನಿಯಮ : ಎಸ್‌ಬಿಐ ಬ್ಯಾಂಕ್ ಖಾತೆದಾರರಿಗೆ ಇತರ ಬ್ಯಾಂಕ್ ಎಟಿಎಂಗಳಲ್ಲಿ ಸಿಗುತ್ತಿದ್ದ ಉಚಿತ ಮಾಸಿಕ ವಹಿವಾಟುಗಳ ಸಂಖ್ಯೆಯನ್ನು 10 ರಿಂದ 5ಕ್ಕೆ ಇಳಿಸಲಾಗಿದೆ.

ಟಿಡಿಎಸ್ ನಿಯಮ : ಅನಿವಾಸಿ ಭಾರತೀಯರಿಂದ ಆಸ್ತಿ ಖರೀದಿಸುವ ನಿವಾಸಿ ವ್ಯಕ್ತಿಗಳು ಅಥವಾ ಎಚ್ಯುಎಫ್ ಫಾರ್ಮ್ 26QB ಮೂಲಕ ಟಿಡಿಎಸ್ ವರದಿ ಮಾಡುವಾಗ ಹೊಸ ವೇಳಾಪಟ್ಟಿ ಇ ಅನ್ನು ಭರ್ತಿ ಮಾಡುವುದು ಕಡ್ಡಾಯವಾಗಿದೆ.

ದಿನಾಂಕ: 24-10-2026 ರಂದು ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು /ಉಪಾಧ್ಯಕ್ಷರು/ ನಿರ್ದೇಶಕರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಮತ್ತು ಅಧಿಕಾರಿಗಳಿಗೆ ಹಾಗೂ ಮಾಹಿತಿ ತಂತ್ರಜ್ಞಾನ ಅಧಿಕಾರಿಗಳಿಗೆ ಮಾಹಿತಿ ತಂತ್ರಜ್ಞಾನ ವಿಷಯವಾಗಿ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ-ಬೆಂಗಳೂರು

ಬೆಂಗಳೂರು: ಆಧುನಿಕ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಹೊಸ ಹೊಸ ತಂತ್ರಜ್ಞಾನಗಳು ದಿನನಿತ್ಯ ಹೊರಬರುತ್ತಿದ್ದು, ಅದಕ್ಕೆ ಅನುಗುಣವಾಗಿ ನಮ್ಮ ಪಟ್ಟಣ ಸಹಕಾರ ಬ್ಯಾಂಕುಗಳು ಅವುಗಳನ್ನು ಅಳವಡಿಸಿಕೊಂಡು ತಮ್ಮ ಗ್ರಾಹಕರಿಗೆ ಉತ್ತಮ ಸೇವೆ ನೀಡಬೇಕಾಗಿರುತ್ತದೆ. ಈ ಹಿನ್ನಲೆಯಲ್ಲಿ ದಿನಾಂಕ : 24.10.2026ರಂದು CREST Infomedia ಸಂಸ್ಥೆಯೊಂದಿಗೆ ಮಹಾಮಂಡಳವು ಬೆಂಗಳೂರಿನ "Hotel Fairfield by Marriott" 59th C Cross, 4th M Block, Manjunath Nagar, Rajajinagar, Bengaluru – 560010 ಇಲ್ಲಿ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿರುತ್ತದೆ. ಸದರಿ ವಿಚಾರ ಸಂಕಿರಣದಲ್ಲಿ ಆಧುನಿಕ ಬ್ಯಾಂಕಿಂಗ್ ವಿಷಯಗಳ ಕುರಿತು ಉಪನ್ಯಾಸ ನೀಡಿ, ಚರ್ಚಿಸಲಾಗುವುದು. ಈ ಸದರಿ ವಿಚಾರ ಸಂಕಿರಣದಲ್ಲಿ ಅಧ್ಯಕ್ಷರು/ಉಪಾಧ್ಯಕ್ಷರು/ನಿರ್ದೇಶಕರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಮತ್ತು ಅಧಿಕಾರಿಗಳಿಗೆ ಹಾಗೂ ಮಾಹಿತಿ ತಂತ್ರಜ್ಞಾನ ಅಧಿಕಾರಿಗಳಿಗೆ (I.T. Head) ಸೇರಿ ಒಂದು ಬ್ಯಾಂಕಿನಿಂದ ಗರಿಷ್ಠ ನಾಲ್ಕು ಪ್ರತಿನಿಧಿಗಳು ಮಾತ್ರ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ.

ಈ ವಿಚಾರ ಸಂಕಿರಣವನ್ನು ದಿನಾಂಕ : 24.10.2026 ರಂದು ಬೆಳಿಗ್ಗೆ 08.30 ಗಂಟೆಗೆ ಉಪಹಾರ ಮತ್ತು ನೋಂದಣಿಯೊಂದಿಗೆ ಪ್ರಾರಂಭಿಸಲಾಗುವುದು. ಈ ವಿಚಾರ ಸಂಕಿರಣದಲ್ಲಿ ಭಾಗವಹಿಸುವ ಪ್ರತಿನಿಧಿಗಳು ದಿನಾಂಕ : 17.10.2026 ರೊಳಗಾಗಿ ಕಡ್ಡಾಯವಾಗಿ ಪ್ರತಿನಿಧಿಗಳ ಹೆಸರುಗಳನ್ನು ಮಹಾಮಂಡಳದ ಇ-ಮೇಲ್ ವಿಳಾಸ : kscubfed@gmail.comಗೆ ತಪ್ಪದೇ ಕಳುಹಿಸಿಕೊಡಬೇಕಾಗಿ ಕೋರಲಾಗಿದೆ. ನೇರವಾಗಿ ಬಂದ ಪ್ರತಿನಿಧಿಗಳಿಗೆ ಪ್ರವೇಶ ಇರುವುದಿಲ್ಲ. ಈ ವಿಚಾರ ಸಂಕಿರಣದಲ್ಲಿ ತಪ್ಪದೇ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ವಿನಂತಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮಹಾಮಂಡಳದ ಉಪ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ ಎಚ್. ಕಿರೇಸೂರ (7411332655) ಮತ್ತು ಶ್ರೀ ಹೆಚ್.ಸಿ. ಶ್ರೀನಿವಾಸ್ (9945566068) ಇವರುಗಳನ್ನು ಸಂಪರ್ಕಿಸಬಹುದಾಗಿದೆ ಎಂದು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ ತಿಳಿಸಿದ್ದಾರೆ.

ರೂ. 12 ಲಕ್ಷ ಕೋಟಿ ನಿವ್ವಳ ನೇರ ತೆರಿಗೆ ಸಂಗ್ರಹ : ಸಿಬಿಡಿಟಿ 2
ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ : 65ನೇ ವಾರ್ಷಿಕ ಮಹಾಸಭೆ 5
ನಿಮ್ಮ ಪ್ರಶ್ನೆ ನಮ್ಮ ಉತ್ತರ 7

ಸಂಪಾದಕೀಯ

ಆತ್ಮೀಯ ಸಹಕಾರಿಗಳೇ...

ಯಾರು ಲೋಕದ ಹಿತಕ್ಕಾಗಿ ತಮ್ಮನ್ನು ತಾವೇ ಅರ್ಪಿಸಿಕೊಳ್ಳುತ್ತಾರೋ ಅವರು ಸಾವಿನ ಆಚೆಗೂ ಉಳಿಯುತ್ತಾರೆ

ಗಾಂಧೀಜಿ ಅವರನ್ನು ಭೇಟಿಯಾದ ವಿದೇಶಿ ಪತ್ರಕರ್ತರೊಬ್ಬರು ಜನರಿಗೆ ನಿಮ್ಮ ಸಂದೇಶವೇನು ಎಂದು ಕೇಳುತ್ತಾರೆ. ಆಗ ಮಗುಳ್ನಕ್ಕ ಗಾಂಧೀಜಿ "ನನ್ನ ಜೀವನವೇ ನನ್ನ ಸಂದೇಶ" ಎಂದು ಹೇಳುತ್ತಾರೆ. ಇದು ಬಹು ಅರ್ಥಗರ್ಭಿತ ಮಾತುಗಳಾಗಿವೆ. ಮೇಲ್ನೋಟಕ್ಕೆ ಸರಳವಾಗಿ ಕಾಣುವ ಈ ನುಡಿಯ ಆಂತರಿಕ ಅರ್ಥ ಬಹಳ ಗಹನವಾಗಿದೆ. ಗಾಂಧೀಜಿ ಅವರು ಸತ್ಯ, ಅಹಿಂಸೆ, ಸರಳತೆ, ಸ್ವದೇಶಿ, ಅಸ್ಪೃಶ್ಯತಾ ನಿವಾರಣೆ ಮತ್ತು ಮಾನವೀಯತೆಯ ಬಗ್ಗೆ ಕೇವಲ ಉಪದೇಶ ನೀಡಲಿಲ್ಲ; ಅವುಗಳನ್ನು ತಮ್ಮ ಬದುಕಿನಲ್ಲಿ ಅನುಸರಿಸಿದವರು. ಈ ಹಿನ್ನೆಲೆಯಲ್ಲಿ ಅವರ ಸಂದೇಶ ಬರಿ ಒಣ ಮಾತುಗಳಾಗಿರದೆ, ಅವರ ಜೀವನದ ನಡೆ–ನುಡಿಗಳಲ್ಲೇ ಅದನ್ನು ಕಾಣಬಹುದಾಗಿತ್ತು.

ಅಕ್ಟೋಬರ್ 2, ನಮ್ಮ ದೇಶದ ಎರಡು ದಿವ್ಯ ಚೇತನಗಳ ನೆನೆವ ದಿನ. ಸರಳ ಬದುಕಿನ, ಸೌಮ್ಯ ನಡುವಳಿಕೆಯ, ನುಡಿದಂತೆ ನಡೆದ, ಸತ್ಯ, ಅಹಿಂಸೆಯಲ್ಲಿ ನಂಬಿಕೆಯನ್ನಿಟ್ಟ, ತನ್ನ ಸುಖ, ಸಂತೋಷವನ್ನು ತ್ಯಾಗ ಮಾಡಿ ದೇಶದ ಹಿತಕ್ಕಾಗಿ ತಮ್ಮನ್ನು ತಾವೇ ಅರ್ಪಿಸಿಕೊಂಡ ಮಹಾತ್ಮ ಗಾಂಧೀ ಹಾಗೂ ಅದೇ ಹಾದಿಯಲ್ಲಿ ಸಾಗಿದ ಲಾಲ್ ಬಹದ್ದೂರ್ ಶಾಸ್ತ್ರಿ ಅವರುಗಳೇ ಆ ಎರಡು ದಿವ್ಯ ಚೇತನಗಳು. ಯಾರು ಲೋಕದ ಹಿತಕ್ಕಾಗಿ ತಮ್ಮನ್ನು ತಾವೇ ಅರ್ಪಿಸಿಕೊಳ್ಳುತ್ತಾರೋ ಅವರು ಸಾವಿನ ಆಚೆಗೂ ಉಳಿಯುತ್ತಾರೆ, ಮುಂದಿನ ಜನಾಂಗವೂ ಸದಾ ಕೃತಜ್ಞತೆಯಿಂದ ಅವರನ್ನು ಸ್ಮರಿಸುತ್ತದೆ ಮತ್ತು ಅಂಥವರ ನೆನೆಯುವಿಕೆಯಲ್ಲಿ ನಮ್ಮ ಬಾಳಿಗೆ ಅರ್ಥಬರುತ್ತದೆ.

ಬರೀ ನೆನೆಯುವುದರಿಂದ ಮಾತ್ರವಲ್ಲ, ಆ ಮಹಾ ಚೇತನಗಳು ಪ್ರತಿಪಾದಿಸಿದ ಕೆಲವು ವಿಚಾರಗಳನ್ನು ನನ್ನ ಕೆಲಸದಲ್ಲೂ ಅಳವಡಿಸಿಕೊಳ್ಳಲು ಯತ್ನಿಸಿದ್ದೇನೆ. ಈ ಹಿಂದೆ ನಾನು ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವನಾಗಿದ್ದೆ. ಆಗ ನಮ್ಮ ರಾಜ್ಯದ ಗ್ರಾಮೀಣ ಭಾಗದ ಜನರ ಗೌರವಯುತ ಬದುಕಿಗೆ ಅಗತ್ಯವಿರುವ ಶೌಚಾಲಯಗಳ ನಿರ್ಮಿಸಲು ವಿಶೇಷ ಆದ್ಯತೆ ನೀಡಿ, ರಾಜ್ಯವನ್ನು ಸಂಪೂರ್ಣ ಬಯಲು ಬಹಿರ್ದೆಸೆ ಮುಕ್ತವನ್ನಾಗಿಸಲು ಪ್ರಯತ್ನಿಸಿದೆ.

ಹಾಗೆಯೇ, ನಮ್ಮ ಗ್ರಾಮೀಣ ಜನರಿಗೆ ಶುದ್ಧ ಕುಡಿಯುವ ನೀರು ದೊರೆಯುವಂತೆ ಮಾಡುವುದು. ಗ್ರಾಮೀಣರಿಗೆ ಶುದ್ಧ ಕುಡಿಯುವ ನೀರು ದೊರೆಯುವಂತೆ ಮಾಡಿದಲ್ಲಿ, ಅವರ ಆರೋಗ್ಯದಲ್ಲಿ ಮಹತ್ತರ ಬದಲಾಣೆ ತರಲು ಸಾಧ್ಯವಿದೆ. ಅದಕ್ಕಾಗಿ ಎಲ್ಲ ಗ್ರಾಮಗಳಿಗೂ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಯಿತು. ಇಂದು ಬಹುತೇಕ ಗ್ರಾಮಗಳಲ್ಲಿ ಶುದ್ಧ ಕುಡಿಯುವ ನೀರು ದೊರೆಯುತ್ತಿದ್ದು, ಜನರ ಆರೋಗ್ಯದಲ್ಲಿ ಸಾಕಷ್ಟು ಚೇತರಿಕೆ ಕಂಡುಬಂದಿರುವುದನ್ನು ಗಮನಿಸಬಹುದಾಗಿದೆ.

ಗಾಂಧೀಜಿಯವರ ದೃಷ್ಟಿಯಲ್ಲಿ ಗ್ರಾಮಗಳ ಅಭಿವೃದ್ಧಿ ಎಂದರೆ ಅವುಗಳು ಸ್ವಾವಲಂಬಿಯಾಗುವುದು. ಇದಕ್ಕಾಗಿ ಪ್ರತಿ ಗ್ರಾಮದಲ್ಲೂ ಸಹಕಾರ ಸಂಸ್ಥೆಗಳು, ಗುಡಿ ಕೈಗಾರಿಕೆಗಳು, ನೇಕಾರಿಕೆ, ಹೈನುಗಾರಿಕೆ ಇನ್ನಿತರ ಚಟುವಟಿಕೆಗಳು ಕ್ರೀಯಾಶೀಲವಾದಲ್ಲಿ, ಗ್ರಾಮೀಣ ಜನರ ಕೈಗಳಿಗೆ ಕೆಲಸ ದೊರೆತು, ಗ್ರಾಮಗಳ ಆರ್ಥಿಕ ಬೆಳವಣಿಗೆ ಖಂಡಿತ ಸಾಧ್ಯವಾಗುತ್ತದೆ. ಆಗ ಮಾತ್ರ ಗಾಂಧೀಜಿಯವರ "ನನ್ನ ಜೀವನವೇ ನನ್ನ ಸಂದೇಶ" ಎನ್ನುವ ಮಾತಿನ ಅರ್ಥ ಸಾಕಾರವಾಗುತ್ತದೆ.

▸▸ ಎಚ್.ಕೆ. ಪಾಟೀಲ

ರೂ. 12 ಲಕ್ಷ ಕೋಟಿ ನಿವ್ವಳ ನೇರ ತೆರಿಗೆ ಸಂಗ್ರಹ : ಸಿಬಿಡಿಟಿ



ನವದೆಹಲಿ : ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್ 1ರಿಂದ ಸೆಪ್ಟೆಂಬರ್ 17ರವರೆಗೆ ರೂ.12.12 ಲಕ್ಷ ಕೋಟಿ ನಿವ್ವಳ ನೇರ ತೆರಿಗೆ ಸಂಗ್ರಹವಾಗಿದೆ ಎಂದು ಕೇಂದ್ರ ನೇರ ತೆರಿಗೆಗಳ ಮಂಡಳಿಯು (ಸಿಬಿಡಿಟಿ) ತಿಳಿಸಿದೆ. ಇದು ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ.13ರಷ್ಟು ಹೆಚ್ಚಳ.

ಕಾರ್ಪೊರೇಟ್ ಕಂಪನಿಗಳಿಂದ ಮುಂಗಡ ತೆರಿಗೆ ಸಂಗ್ರಹದ ಪ್ರಮಾಣದಲ್ಲಿ ಹೆಚ್ಚಳವಾಗಿರುವುದು ತೆರಿಗೆ ಸಂಗ್ರಹದ ಒಟ್ಟಾರೆ ಏರಿಕೆಗೆ ಕಾರಣ ಎಂದು ತಿಳಿಸಿದೆ. ಮುಂಗಡ ತೆರಿಗೆ ಸಂಗ್ರಹವು ಶೇ.16ರಷ್ಟು ಹೆಚ್ಚಳವಾಗಿದ್ದು, ರೂ. 5.22 ಲಕ್ಷ ಕೋಟಿ ಸಂಗ್ರಹವಾಗಿದೆ. ಇದರಲ್ಲಿ ಕಾರ್ಪೊರೇಟ್ ಕಂಪನಿಗಳ ತೆರಿಗೆ ಪಾವತಿ ರೂ. 4.16 ಲಕ್ಷ ಕೋಟಿ ಮತ್ತು ಕಾರ್ಪೊರೇಟ್‌ಯೇತರ ತೆರಿಗೆ ರೂ. 1.06 ಲಕ್ಷ ಕೋಟಿ ಒಳಗೊಂಡಿದೆ ಎಂದು ತಿಳಿಸಿದೆ. ಮರುಪಾವತಿ (ರೀಫಂಡ್) ಮೊತ್ತವು ಶೇ. 29ರಷ್ಟು ಏರಿಕೆಯಾಗಿದ್ದು, ರೂ.2.20 ಲಕ್ಷ ಕೋಟಿಯಾಗಿದೆ. ಒಟ್ಟು ನೇರ ತೆರಿಗೆ ಸಂಗ್ರಹವು ರೂ.14.32 ಲಕ್ಷ ಕೋಟಿಯಾಗಿದ್ದು, ಶೇ.15ರಷ್ಟು ಹೆಚ್ಚಳವಾಗಿದೆ ಎಂದು ತಿಳಿಸಿದೆ.

ನಿವ್ವಳ ಕಾರ್ಪೊರೇಟ್ ತೆರಿಗೆ ಸಂಗ್ರಹದಲ್ಲಿ ಶೇ. 19ರಷ್ಟು ಹೆಚ್ಚಳವಾಗಿ, ರೂ.5.56 ಲಕ್ಷ ಕೋಟಿಯಷ್ಟಾಗಿದೆ. ಕಾರ್ಪೊರೇಟ್‌ಯೇತರ ತೆರಿಗೆ ಸಂಗ್ರಹವು ರೂ. 6.16 ಲಕ್ಷ ಕೋಟಿಯಾಗಿದ್ದು, ಶೇ. 6ರಷ್ಟು ಹೆಚ್ಚಳವಾಗಿದೆ. ಷೇರು ವಹಿವಾಟು ತೆರಿಗೆಯಿಂದ (ಎಸ್‌ಟಿಟಿ) ರೂ.40,214 ಕೋಟಿ ಸಂಗ್ರಹವಾಗಿದೆ. ಇದು ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ.53ರಷ್ಟು ಹೆಚ್ಚಳವಾಗಿದೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಕೇಂದ್ರ ಸರ್ಕಾರವು ನೇರ ತೆರಿಗೆ ಮೂಲಕ ರೂ.26.97 ಲಕ್ಷ ಕೋಟಿ ಸಂಗ್ರಹದ ಗುರಿ ಹೊಂದಿದೆ. ಕಳೆದ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಶೇ.15ರಷ್ಟು ಹೆಚ್ಚಳವಿದು. 'ನೇರ ತೆರಿಗೆ ಸಂಗ್ರಹವು ಆರೋಗ್ಯಕರ ಆರ್ಥಿಕ ಚಟುವಟಿಕೆಯನ್ನು ಸೂಚಿಸುತ್ತಿದೆ. ಮುಂಗಡ ತೆರಿಗೆ ಪಾವತಿಗಳಲ್ಲಿನ ಸ್ಥಿರವಾದ ಬೆಳವಣಿಗೆಯು ತೆರಿಗೆದಾರರ ವಿಶ್ವಾಸ, ವ್ಯವಹಾರದ ಕಾರ್ಯಕ್ಷಮತೆಯ ಸಕಾರಾತ್ಮಕ ಸೂಚಕವಾಗಿದೆ' ಎಂದು ತೆರಿಗೆ ಸಲಹೆಗಾರಾದ ರಿಚಾ ಸಾಹ್ನಿ ಹೇಳಿದ್ದಾರೆ.

ಸಿದ್ಧಗಂಗಾ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ 33ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆ

ತುಮಕೂರು: ತುಮಕೂರು ನಗರದ ಸಿದ್ಧಗಂಗಾ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಪರಮಪೂಜ್ಯ ಡಾ॥ ಶ್ರೀ ಶ್ರೀ ಶಿವಕುಮಾರಮಹಾಸ್ವಾಮಿಗಳವರ ಅಮೃತ ಹಸ್ತದಿಂದ ದಿನಾಂಕ : 02.02.1995ರಲ್ಲಿ ಪ್ರಾರಂಭವಾಗಿ 32ನೇ ವರ್ಷದಲ್ಲಿ ಮುನ್ನಡೆಯುತ್ತಿದ್ದು, 33ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆಯು ಎಸ್.ಐ.ಟಿ ಬಿರ್ಲಾ ಸಭಾಂಗಣ, ತುಮಕೂರು ಇಲ್ಲಿ ದಿನಾಂಕ : 06.09.2026 ರಂದು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಟಿ.ಕೆ. ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿತು.

ಅಧ್ಯಕ್ಷರಾದ ಶ್ರೀ ಟಿ.ಕೆ. ನಂಜುಂಡಪ್ಪವರು ಮಾತನಾಡಿ ನಮ್ಮ ಬ್ಯಾಂಕು ತುಮಕೂರಿನ ಪ್ರತಿಷ್ಠಿತ ಬ್ಯಾಂಕುಗಳಲ್ಲಿ ಒಂದಾಗಿದ್ದು ಪ್ರಸಕ್ತ ಸಾಲಿನಲ್ಲಿ ಒಟ್ಟು ರೂ. 8,72,24,824.34ಗಳ ಲಾಭ ಗಳಿಸಿ ಸಹಕಾರ ಕ್ಷೇತ್ರದಲ್ಲಿ ಯಶಸ್ವಿಯಾಗಿ ಮುನ್ನಡೆಯುತ್ತಿದ್ದು ವರದಿ ಸಾಲಿನಲ್ಲಿ ನಿವ್ವಳ ಎನ್.ಪಿ.ಎ. ಶೇಕಡ ಶೂನ್ಯ ಆಗಿದೆ. ವರದಿ ಸಾಲಿನ ನಿವ್ವಳ ಲಾಭ ಅವಕಾಶಗಳ ನಂತರ ರೂ. 3,22,24,824.34 ಗಳು ಇದ್ದು, 15% ಡಿವಿಡೆಂಡ್ ಅನ್ನು ಘೋಷಿಸಲಾಯಿತು. ಭಾರತೀಯ ರಿಜರ್ವ್ ಬ್ಯಾಂಕಿನಿಂದ (ECBA) "ವ್ಯವಹಾರ ದೃಢೀಕರಣಕ್ಕಾಗಿ ಅರ್ಹತಾ ಮಾನದಂಡ ಹೊಂದಲಾದ ಪಟ್ಟಣ ಸಹಕಾರ ಬ್ಯಾಂಕು" ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದು ಸಭೆಗೆ ತಿಳಿಸಿದರು.

ಈ ಸಭೆಯಲ್ಲಿ 2025–2026ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ. ಯಲ್ಲಿ ಶೇ. 90% ಕ್ಕಿಂತ ಹೆಚ್ಚಿನ ಅಂಕ ಪಡೆದು ಉತ್ತೀರ್ಣರಾದ ಸದಸ್ಯರ ಮಕ್ಕಳುಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಈ ಸಭೆಯಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಟಿ.ಕೆ. ನಂಜುಂಡಪ್ಪನವರು, ಉಪಾಧ್ಯಕ್ಷರಾದ ಶ್ರೀ ಕೆ.ಎಸ್. ಶಂಕರಯ್ಯನವರು, ವ್ಯವಸ್ಥಾಪನಾ ಮಂಡಳಿ ಅಧ್ಯಕ್ಷರು ಮತ್ತು ಬ್ಯಾಂಕಿನ ನಿರ್ದೇಶಕರಾದ ಶ್ರೀ ಬಿ.ಎಸ್. ರುದ್ರೇಶಯ್ಯನವರು, ನಿರ್ದೇಶಕರುಗಳಾದ ಶ್ರೀ ಮಹೇಶಪ್ಪನವರು, ಡಾ. ಎಸ್. ಪರಮೇಶ್‌ರವರು, ಡಾ॥ ಆರ್.ಸಿ. ಪುಟ್ಟಬುದ್ಧಿರವರು, ಡಾ॥ ಶಿವಕುಮಾರಯ್ಯನವರು, ಶ್ರೀ ಟಿ. ಎಂ. ಸ್ವಾಮಿರವರು, ಶ್ರೀ ಆರ್. ಚಿಕ್ಕಯ್ಯನವರು, ಶ್ರೀ ಎಸ್. ವಿಶ್ವನಾಥ್‌ರವರು ಚಾರ್ಟರ್ಡ್ ಅಕೌಂಟೆಂಟ್, ಶ್ರೀ ಕೆ.ಎಂ. ಸ್ವಾಮಿರವರು, ಶ್ರೀ ರಾಮಯ್ಯನವರು, ಶ್ರೀಮತಿ ಮಂಜುಳ ಪ್ರಸಾದ್‌ರವರು, ಡಾ॥ ಎಸ್. ರೇಣುಕಲತಾರವರು, ವ್ಯವಸ್ಥಾಪನಾ ಮಂಡಳಿ ಸದಸ್ಯರುಗಳಾದ ಶ್ರೀ ಎಸ್. ವಿಶ್ವನಾಥಯ್ಯನವರು, ಪ್ರೊ. ಪಿ. ಪರಮಶಿವಯ್ಯನವರು, ಶ್ರೀ ಸಿ.ಆರ್. ರಮೇಶ್‌ರವರು, ಮುಖ್ಯಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಹೆಚ್.ಕೆ. ಶಿವಪ್ರಕಾಶ್‌ರವರು, ಬ್ಯಾಂಕಿನ ಸದಸ್ಯರುಗಳು ಮತ್ತು ಸಿಬ್ಬಂದಿ ವರ್ಗದವರು ಪಾಲ್ಗೊಂಡಿದ್ದರು.

ಶ್ರೀ ಗೋಕರ್ಣನಾಥ ಕೋ-ಆಪರೇಟಿವ್ ಬ್ಯಾಂಕ್-102ನೇ ವಾರ್ಷಿಕ ಮಹಾಸಭೆ

ಶತಮಾನಕ್ಕೂ ಮೀರಿದ ಸೇವಾ ಪರಂಪರೆಯನ್ನು ಹೊಂದಿರುವ ಶ್ರೀ ಗೋಕರ್ಣನಾಥ ಕೋ–ಆಪರೇಟಿವ್ ಬ್ಯಾಂಕ್‌ನ ವಾರ್ಷಿಕ ಸಾಮಾನ್ಯ ಸಭೆ (AGM) ದಿನಾಂಕ : 06–09–2026 ರಂದು ಶ್ರೀ ಕುದ್ರೋಳಿ ಗೋಕರ್ಣನಾಥ ದೇವಸ್ಥಾನದ ಜಯ ಸಿ. ಸುವರ್ಣ ಕಲ್ಯಾಣ ಮಂಟಪದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಚಂದ್ರಶೇಖರ್ ಕುಮಾರ್ ರವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ನಡೆಯಿತು. ಸಭೆಯಲ್ಲಿ ಬ್ಯಾಂಕಿನ ವಾರ್ಷಿಕ ಕಾರ್ಯನಿರ್ವಹಣೆ, ಆರ್ಥಿಕ ಪ್ರಗತಿ, ವ್ಯವಹಾರ ವಿಸ್ತರಣೆ ಹಾಗೂ ಭವಿಷ್ಯದ ಅಭಿವೃದ್ಧಿ ಯೋಜನೆಗಳ ಕುರಿತು ಸಮಗ್ರವಾಗಿ ಪರಿಶೀಲಿಸಲಾಯಿತು. ಬ್ಯಾಂಕ್ ಪ್ರಸಕ್ತ ಸಾಲಿನಲ್ಲಿ ರೂ.291.71 ಲಕ್ಷ ನಿರ್ವಹಣಾ ಲಾಭ ಗಳಿಸಿ ರೂ.200.04 ಲಕ್ಷ ನಿವ್ವಳ ಲಾಭ ಗಳಿಸಿರುತ್ತದೆ. ಬ್ಯಾಂಕಿನ ಆರ್ಥಿಕ ಕಾರ್ಯಕ್ಷಮತೆಯಲ್ಲಿ ಗಮನಾರ್ಹ ಸುಧಾರಣೆ ಹಾಗೂ ಬ್ಯಾಂಕಿನ ವಿವಿಧ ವ್ಯವಹಾರ ಕ್ಷೇತ್ರಗಳಲ್ಲಿ ಗಣನೀಯ ಪ್ರಗತಿ ಕಂಡುಬಂದಿದ್ದು, ಉತ್ತಮ ಆರ್ಥಿಕ ಶಿಸ್ತು, ಪರಿಣಾಮಕಾರಿ ಆಡಳಿತ ಮತ್ತು ಸಮರ್ಥ ಕಾರ್ಯ ನಿರ್ವಹಣೆಯ ಫಲವಾಗಿ ಈ ಸಾಧನೆ ಸಾಧ್ಯವಾಗಿದೆ ಎಂದು ಅಭಿಪ್ರಾಯಪಡಲಾಯಿತು. ಬ್ಯಾಂಕಿನ ಉತ್ತಮ ಆರ್ಥಿಕ ಫಲಿತಾಂಶವನ್ನು ಪರಿಗಣಿಸಿ, ಸದಸ್ಯರ ಹಿತಾಸಕ್ತಿಗೆ ಆದ್ಯತೆ ನೀಡುವ ನಿಟ್ಟಿನಲ್ಲಿ ಸದಸ್ಯರಿಗೆ ಶೇ.10ರಷ್ಟು ಡಿವಿಡೆಂಡ್ ಘೋಷಿಸಲಾಯಿತು. ಸಭೆಯನ್ನು ಬ್ಯಾಂಕಿನ ಜನರಲ್ ಮ್ಯಾನೇಜರ್ ಶ್ರೀ ಚಂದ್ರಶೇಖರ್ ಪಿ. ಅವರು ಸಮರ್ಥವಾಗಿ ಸಂಯೋಜಿಸಿ ನಿರ್ವಹಿಸಿದರು. ವ್ಯವಸ್ಥಾಪನಾ ಮಂಡಳಿಯ ಅಧ್ಯಕ್ಷರಾದ ಶ್ರೀ ಜಯರಾಮ್ ಕಾರಂದೂರು ವಂದನಾರ್ಪಣೆಗೈದರು. ಉಪಾಧ್ಯಕ್ಷರಾದ ಶ್ರೀ ಜಯರಾಮ್ ಪೂಜಾರಿ ಹಾಗೂ ನಿರ್ದೇಶಕರುಗಳಾದ ಶ್ರೀ ಜಯರಾಮ್ ಕಾರಂದೂರು, ಶ್ರೀ ಯೋಗೀಶ್ ಕೋಟ್ಯಾನ್, ಶ್ರೀ ಹರೀಶ್ ಪೂಜಾರಿ ಕೆ, ಶ್ರೀ ಕುಪ್ಪ ಪೂಜಾರಿ, ಶ್ರೀ ರಾಜೇಶ್ ಕುಮಾರ್ ಜಿ. ಸುವರ್ಣ, ಶ್ರೀಮತಿ ಗಾಯತ್ರಿ ಗಣೇಶ್, ಶ್ರೀಮತಿ ಚಂದ್ರಾವತಿ, ಶ್ರೀ ನಾಗರಾಜ, ಶ್ರೀ ಜಗದೀಶ್ ಎನ್, ಶ್ರೀ ಅನಿಲ್ ಕುಮಾರ್, ಶ್ರೀ ಪ್ರಕಾಶ್, ಶ್ರೀ ಕೆ. ರಮೇಶ್ ಬಂಗೇರ, ಶ್ರೀ ಕೇಶವ ಬಿ, ಶ್ರೀ ಶಂಕರ ನಾಯ್ಕ್, ಶ್ರೀಮತಿ ಆಶಾಲತಾ, ಶ್ರೀ ವರದರಾಜ್ ಎ, ಶ್ರೀ ಶ್ರವಣ್ ಕುಮಾರ್ ಹಾಗೂ ವ್ಯವಸ್ಥಾಪನಾ ಮಂಡಲಿ ಸದಸ್ಯರಾದ ಶ್ರೀ ರಾಜರಾಮ್ ಬಿ. ಅಂಚನ್, ಶ್ರೀ ಜಯಾನಂದ ಎಮ್ ಮತ್ತು ಶ್ರೀ ದೀಪಕ್ ಎಂ. ಕೋಟ್ಯಾನ್ ರವರು ಉಪಸ್ಥಿತರಿದ್ದರು.

ವೀರಶೈವ ಸಹಕಾರಿ ಬ್ಯಾಂಕಿನ 51ನೇ ಸರ್ವಸದಸ್ಯರ ವಾರ್ಷಿಕ ಸಭೆ

ಬೆಂಗಳೂರು ನಗರದ ವೀರಶೈವ ಸಹಕಾರಿ ಬ್ಯಾಂಕಿನ 51ನೇ ಸರ್ವ ಸದಸ್ಯರ ವಾರ್ಷಿಕ ಸಭೆಯು ದಿನಾಂಕ : 12–09–2026 ಶನಿವಾರದಂದು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಬಿ.ಎಸ್. ಪರಮಶಿವಯ್ಯರವರ ಅಧ್ಯಕ್ಷತೆಯಲ್ಲಿ ಶ್ರೀ ಬಸವೇಶ್ವರ ಸುಜ್ಞಾನ ಮಂಟಪ, ವಿಜಯನಗರ, ಬೆಂಗಳೂರು ಇಲ್ಲಿ ಜರುಗಿತು.

ಬ್ಯಾಂಕಿನ ಆಡಳಿತ ಮಂಡಲಿಯ ಅಧ್ಯಕ್ಷರಾದ ಶ್ರೀ ಬಿ.ಎಸ್.ಪರಮಶಿವಯ್ಯರವರು ಮತ್ತು ಉಪಾಧ್ಯಕ್ಷರಾದ ಶ್ರೀ ಬಿ.ಪಿ. ಮಹಾದೇವ್‌ಪ್ರಸಾದ್‌ರವರು ಹಾಗೂ ನಿರ್ದೇಶಕರುಗಳಾದ ಶ್ರೀ ಬಿ.ಎಸ್. ಪ್ರಭುದೇವರು, ಶ್ರೀ ಪುಟ್ಟಗಂಗಯ್ಯ. ಎಸ್.ಹೆಚ್, ಶ್ರೀ ಸಿ.ವಿ. ವಿಶ್ವನಾಥ್, ಶ್ರೀ ಸದಾಶಿವಯ್ಯ, ಶ್ರೀ ಸಿ.ಸಿದ್ಧಲಿಂಗಯ್ಯ, ಶ್ರೀಮತಿ ರುದ್ರಾಂಬ, ಶ್ರೀ ಬಿ.ಪಿ. ಶಿವಕುಮಾರಸ್ವಾಮಿ, ಶ್ರೀ ನಾಗಭೂಷಣ್.ಬಿ.ಎನ್, ಶ್ರೀ ಲೋಕೇಶ್.ಹೆಚ್.ಕೆ, ಶ್ರೀಮತಿ ಎಂ.ಎಸ್.ನಯನ, ಶ್ರೀ ರಾಜೇಶ್.ಬಿ.ಪಿ, ಶ್ರೀ ಬಿ.ಎಸ್.ಈಶಣ್ಣ, ಶ್ರೀಮತಿ ಶ್ವೇತ ಸಿದ್ದೇಶ್, ಶ್ರೀ ರಾಮರಾವ್ ವಿ ರಾಯ್ಕರ್, ಶ್ರೀ ಶರಣ್ ನಾಗೇಂದ್ರ ಮರಸು, ಶ್ರೀ CA. ಪ್ರದೀಪ್‌ಕುಮಾರ್.ಜಿ, ಶ್ರೀ ಬಿ.ಎನ್. ಈಶ್ವರಯ್ಯ, ಶ್ರೀ ವಿಶ್ವೇಶ್ವರ.ಜೆ.ಸಿ ರವರುಗಳು ಉದ್ಘಾಟಿಸಿದರು.

ಬ್ಯಾಂಕಿನ 2025–2026ನೇ ಸಾಲಿನ ಆರ್ಥಿಕ ಅಂಕಿ–ಅಂಶಗಳನ್ನು ಸಭೆಯ ಮುಂದೆ ಮಂಡಿಸುತ್ತಾ, ಪ್ರಸಕ್ತ ಸಾಲಿನ ಅಂತ್ಯಕ್ಕೆ ಠೇವಣಿ ರೂ.407.85 ಕೋಟಿಗಳನ್ನು ಸಂಗ್ರಹಿಸಿ ರೂ.221.20 ಕೋಟಿ ಸಾಲ ವಿತರಿಸಲಾಗಿರುತ್ತದೆ. ಹಾಗೆಯೇ ದುಡಿಯುವ ಬಂಡವಾಳ ರೂ.467.04 ಕೋಟಿಗಳಿರುವುದಾಗಿ ತಿಳಿಸಿದರು. ಬಂಡವಾಳ ಪರ್ಯಾಪ್ತ ಅನುಪಾತ (CRAR) ಶೇ.17.39ರಷ್ಟು ಇದ್ದು ಸದರಿ ಸಾಲಿನಲ್ಲಿ ನಿವ್ವಳ ಲಾಭ ರೂ.252.08 ಲಕ್ಷಗಳು ಗಳಿಸಿದ್ದು, ಬ್ಯಾಂಕಿನ ಒಟ್ಟು ವ್ಯವಹಾರವು ರೂ.629.06 ಕೋಟಿಗಳಿದ್ದು, ಬ್ಯಾಂಕಿನಲ್ಲಿ ಸುಸ್ತಿ ಸಾಲಗಳನ್ನು ಪರಿಣಾಮಕಾರಿಯಾಗಿ ವಸೂಲು ಮಾಡುತ್ತಿರುವ ಪ್ರಯುಕ್ತ ನಿವ್ವಳ ಎನ್‌ಪಿಎ ಪ್ರಮಾಣ ಶೂನ್ಯದಲ್ಲಿದ್ದು, Gross ಎನ್‌ಪಿಎ ಪ್ರಮಾಣ ಶೇ.2.48 ರಷ್ಟು ಇರುತ್ತದೆ. ಸದರಿ ವರ್ಷದ ಆಡಿಟ್ ವರ್ಗೀಕರಣದನ್ವಯ "ಎ"ಶ್ರೇಣಿಯನ್ನು ಪಡೆಯಲಾಗಿದೆ.

ಸಹಕಾರಿ ಬ್ಯಾಂಕುಗಳ ದೃಢತೆಯನ್ನು ನಿರ್ಧರಿಸಿ FSWM [Financially Sound and Well Managed] ಎಂಬ ಮಾನದಂಡ ಇತ್ತು, ಪ್ರಸಕ್ತ ಸಾಲಿನಿಂದ ಈ ಮಾನದಂಡವನ್ನು ಬ್ಯಾಂಕ್ ECBA [Eligibility Criteria for Business Authorization] ಎಂದು ನಿರ್ಧರಿಸಲಾಗಿದೆ.

ಬ್ಯಾಂಕು ಸಧೃಡವಾಗಿದ್ದು, ಯಾವುದೇ ಭೀತಿಯಿಲ್ಲದೆ ಬ್ಯಾಂಕಿನ ಸದಸ್ಯರು, ಗ್ರಾಹಕರು ಠೇವಣಿದಾರರು ಹೆಮ್ಮೆಯಿಂದ ನಮ್ಮ ಬ್ಯಾಂಕಿನ ಶಾಖೆಗಳಲ್ಲಿ ಠೇವಣಿಯಿಡುವ ಹಾಗೆಯೇ ಅವಶ್ಯವಿದ್ದಲ್ಲಿ ವಿವಿಧ ಸಾಲಗಳನ್ನು ಪಡೆಯುವುದರ ಮೂಲಕ ಬ್ಯಾಂಕಿನ ವ್ಯವಹಾರದಲ್ಲಿ ಸಕ್ರಿಯವಾಗಿ ಭಾಗವಹಿಸಿ ಅಭಿವೃದ್ಧಿಗೆ ಸಹಕರಿಸಬೇಕೆಂದು ಕೋರಿದರು. 2025–26ನೇ ಸಾಲಿಗೆ ಶೇ.11 ರಷ್ಟು ಡಿವಿಡೆಂಡ್‌ನ್ನು ನೀಡಲು ಸಭೆಯಲ್ಲಿ ಘೋಷಿಸಲಾಯಿತು. ಸದಸ್ಯರ ಮಕ್ಕಳು ಎಸ್‌ಎಸ್‌ಎಲ್‌ಸಿ/ಪಿಯುಸಿ ಪರೀಕ್ಷೆಗಳಲ್ಲಿ ಶೇ.95 ರಷ್ಟು ಅತ್ಯುತ್ತಮ ಅಂಕಗಳನ್ನು ಗಳಿಸಿ ತಂದೆ–ತಾಯಿಗಳ ಪ್ರೀತಿ ಪಾತ್ರರಾಗಿರುವ ವಿದ್ಯಾರ್ಥಿ/ ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ಮಾಡಲಾಯಿತು.

ದಿ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಶಿಕಾರಿಪುರ : 62ನೇ ವಾರ್ಷಿಕ ಮಹಾಸಭೆ

ಶಿಕಾರಿಪುರ: ದಿ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಶಿಕಾರಿಪುರ ಇದರ 2025–26ನೇ ಸಾಲಿನ 62ನೇ ವಾರ್ಷಿಕ ಮಹಾಸಭೆಯು ದಿನಾಂಕ : 06–09–2026ರಂದು ಶಿಕಾರಿಪುರ ನಗರದ ಮಂಡಿಪೇಟೆಯಲ್ಲಿರುವ ಜೈನ ಮಂದಿರದಲ್ಲಿ ಜ್ಯೋತಿ ಬೆಳಗಿಸುವುದರ ಮೂಲಕ ಮಹಾಸಭೆಯು ಆರಂಭವಾಯಿತು. ನಂತರ ಸಭೆಯ ಅಧ್ಯಕ್ಷತೆ ವಹಿಸಿದ್ದ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಹೆಚ್.ಎಸ್.ಮಲ್ಲಣ್ಣಾರ್ಯ ರವರು ಮಾತನಾಡುತ್ತ ಹಣಕಾಸು ವರ್ಷದ ಕೊನೆಗೆ ರೂ.238.19 ಲಕ್ಷ (ಎರಡು ಕೋಟಿ 38 ಲಕ್ಷ ರೂಪಾಯಿಗಳು) ಷೇರು ಬಂಡವಾಳವಿರುತ್ತದೆ. ಮತ್ತು ರಿಸರ್ವ್ ಫಂಡ್ ಹಾಗೂ ನಿಧಿಗಳು ಕೂಡಿ 100.63 ಲಕ್ಷ ರೂಪಾಯಿಗಳಾಗಿರುತ್ತವೆ. ಸಾಲ

ಹಾಗೂ ಮುಂಗಡಗಳು ಸೇರಿ ರೂ. 3943.79 ಲಕ್ಷಗಳಾಗಿರುತ್ತದೆ ವರ್ಷದ ಕೊನೆಗೆ ಒಟ್ಟು ಸಾಲ ರೂ.3943.79 ಲಕ್ಷ ರೂ.ಗಳಲ್ಲಿ 2431.24 ಲಕ್ಷ ರೂಪಾಯಿಗಳನ್ನು ಅದ್ಯತಾ ವಲಯಕ್ಕೆ ಸಾಲ ನೀಡಿದ್ದು ಒಟ್ಟು ಸಾಲದ ಶೇ.61.65% ರಷ್ಟು ಇರುತ್ತದೆ. ವರದಿ ಸಾಲಿನ ಒಟ್ಟು ಆದಾಯ ರೂ. 110.49 ಲಕ್ಷಗಳಲ್ಲಿ ಅನುತ್ಪಾದಕ ಆಸ್ತಿ ರೂ.33.80 ಲಕ್ಷಗಳನ್ನು ಪಾವತಿಸಿ, ರೂ76.69ಲಕ್ಷಗಳು ನಿವ್ವಳ ಲಾಭ ಆಗಿರುತ್ತದೆ. ಹಾಗೂ ವರದಿ ವರ್ಷದಲ್ಲಿ 12% ರಷ್ಟು ಲಾಭಾಂಶವನ್ನು ಸದಸ್ಯರಿಗೆ ನೀಡಬೇಕೆಂದು ಬ್ಯಾಂಕಿನ ಆಡಳಿತ ಮಂಡಳಿಯು ನಿರ್ಧರಿಸಿದ್ದಾರೆ ಎಂದರು. ಈ ಸಂದರ್ಭದಲ್ಲಿ ವೇದಿಕೆ ಮೇಲೆ ಬ್ಯಾಂಕಿನ ಸದಸ್ಯರು ಹಾಗೂ ಶಿವಮೊಗ್ಗ ಲೋಕಸಭಾ ಸಂಸದರಾದ ಶ್ರೀ ಬಿ.ವೈ ರಾಘವೇಂದ್ರ, ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಹೆಚ್.ಎಸ್.ಮಲ್ಲಣ್ಣಾರ್ಯ, ಉಪಾಧ್ಯಕ್ಷರಾದ ಶ್ರೀಮತಿ ಜಯಂತಿ.ಎಂ.ಶಾಸ್ತ್ರಿ, ನಿರ್ದೇಶಕರಾದ ಶ್ರೀ ಎಂ.ಬಿ.ಚನ್ನವೀರಪ್ಪ, ಶ್ರೀ ಹೆಚ್.ಎಸ್.ಮಂಜುನಾಥ್, ಶ್ರೀ ಆರ್.ಶಿವಬಸಪ್ಪ, ಶ್ರೀ ಹೆಚ್.ಸಿದ್ದಲಿಂಗೇಶ್, ಶ್ರೀ ಹೆಚ್.ಸಿ.ಯೋಗೀಶ್, ಶ್ರೀಮತಿ ಎಸ್.ಎಸ್.ಅನುಪಮ, ಶ್ರೀ ಯೋಗೀಶ್ ಅಂಗಡಿ, ಶ್ರೀ ಬಿ.ಪಿ.ಉಮಾಶಂಕರ, ಶ್ರೀ ಎಸ್.ಎಸ್.ಗಜೇಂದ್ರ, ಶ್ರೀ ಹೆಚ್.ಹೆಚ್. ರವಿಕುಮಾರ್, ಶ್ರೀ ಹೆಚ್.ಕೆ.ಮಹಾಬಲಗಿರಿ, ಶ್ರೀ ಹೆಚ್.ಆರ್.ಸುರೇಶ್ ಕುಮಾರ್ ಹಾಗೂ ಕಾನೂನು ಸಲಹೆಗಾರರಾದ ಶ್ರೀ ವಿನಯ್ ಬಾಬು & ಶ್ರೀ ಗಣೇಶ್ ಪ್ರಸಾದ್ ವಕೀಲರು, ಆಸ್ತಿ ಮೌಲ್ಯ ಮಾಪಕರಾದ ಶ್ರೀ ಎಂ.ಸೋಮಶೇಖರ್‌ರವರು & ಶ್ರೀ ಕಿರಣ್ ಕುಮಾರ್ ಹೆಚ್ ಎಂ, ಇಂಜೀನಿಯರ್, ಹಾಗೂ ಬ್ಯಾಂಕಿನ ಸಿಬ್ಬಂದಿಗಳು ಹಾಗೂ ಸರ್ವ ಸದಸ್ಯರು ಹಾಜರಿದ್ದರು.

ದಾವಣಗೆರೆ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ : 65ನೇ ವಾರ್ಷಿಕ ಮಹಾಸಭೆ

ದಾವಣಗೆರೆ : ನಗರದ ಶ್ರೀ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ಬ್ಯಾಂಕಿನ 65ನೇ ವರ್ಷದ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯಲ್ಲಿ ಪಾಲ್ಗೊಂಡಿದ್ದ ಹಿರಿಯ–ಕಿರಿಯ ಸದಸ್ಯರು, ಬ್ಯಾಂಕಿನ ನಿರಂತರ ಪ್ರಗತಿ ಹಾಗೂ ಕ್ರಿಯಾಶೀಲತೆ ಕಂಡು ಸಂತಸ ವ್ಯಕ್ತಪಡಿಸಿದರು.

ಬ್ಯಾಂಕಿನ ವಾರ್ಷಿಕ ವರದಿ ಪರಿಶೀಲಿಸಿ, ವಿವಿಧ ಅಂಶಗಳ ಕುರಿತು ಆಡಳಿತ ಮಂಡಳಿಯಿಂದ ಸೂಕ್ತ ಸ್ಪಷ್ಟನೆ ಪಡೆದ ಷೇರುದಾರರು, ಸಂಸ್ಥೆಯ ಮುಂದಿನ ಶ್ರೇಯೋಭಿವೃದ್ಧಿಗೆ ಹಲವು ಉಪಯುಕ್ತ ಸಲಹೆ–ಸೂಚನೆ ನೀಡಿದರು.

ಷೇರುದಾರರ ಅಭಿಪ್ರಾಯ ಆಲಿಸಿ ಮಾತನಾಡಿದ ಬ್ಯಾಂಕ್ ಅಧ್ಯಕ್ಷ ಬಿ.ಸಿ. ಉಮಾಪತಿ, ಪ್ರತಿಯೊಂದು ವಾರ್ಷಿಕ ಮಹಾಸಭೆಯಲ್ಲೂ ಷೇರುದಾರರು ಹಾಗೂ ಆಡಳಿತ ಮಂಡಳಿ ನಡುವೆ ನಡೆಯುವ ಆರೋಗ್ಯಕರ ಚರ್ಚೆಗಳೇ ಬ್ಯಾಂಕ್ ಅಭಿವೃದ್ಧಿಗೆ ಮೂಲ ಪ್ರೇರಣೆ. ಇದೇ ವೇಳೆ ಸದಸ್ಯರಿಗೆ ಸಂತಸದ ಸುದ್ದಿ ನೀಡಿದ ಬಿ.ಸಿ. ಉಮಾಪತಿ, ಸದಸ್ಯರ ಷೇರು ಹಣದ ಮೇಲೆ ಶೇ. 14 ರಂತೆ ಲಾಭಾಂಶ ನೀಡಲು ಆಡಳಿತ ಮಂಡಳಿ ತೀರ್ಮಾನಿಸಿದೆ ಎಂದು ಸಭೆಯ ಕರತಾಡನದ ಮಧ್ಯೆ ಘೋಷಿಸಿದರು.

2026ರ ಮಾರ್ಚ್ ಅಂತ್ಯಕ್ಕೆ ಬ್ಯಾಂಕ್ 14.25 ಕೋಟಿ ರೂ. ಲಾಭ ಗಳಿಸಿದ್ದು, ಇದು ಕಳೆದ ಸಾಲಿಗಿಂತ 1.95 ಕೋಟಿ ರೂ. ಕಡಿಮೆಯಾಗಿದೆ. ಠೇವಣಿ ಸಂಗ್ರಹದಲ್ಲಿ ಕಳೆದ ವರ್ಷಕ್ಕಿಂತ 91.96 ಕೋಟಿ ರೂ. ಏರಿಕೆಯಾಗಿದ್ದು, ಒಟ್ಟು 692.64 ಕೋಟಿ ರೂ. ಸಂಗ್ರಹಗೊಂಡಿದೆ. ಸದಸ್ಯರ ಅಗತ್ಯಕ್ಕೆ ತಕ್ಕಂತೆ 480.24 ಕೋಟಿ ರೂ. ಸಾಲ–ಸೌಲಭ್ಯ ವಿತರಿಸಲಾಗಿದ್ದು, ಇದು ಕಳೆದ ವರ್ಷಕ್ಕಿಂತ 52.20 ಕೋಟಿ ರೂ. ಹೆಚ್ಚಾಗಿದೆ. ಬ್ಯಾಂಕಿನ ದುಡಿಯುವ ಬಂಡವಾಳ 98.60 ಕೋಟಿ ರೂ. ವೃದ್ಧಿಯಾಗಿದ್ದು, ಒಟ್ಟು 830.62 ಕೋಟಿ ರೂ.ಗೆ ತಲುಪಿದೆ. 111.39 ಕೋಟಿ ರೂ. ಕಾಯ್ದಿಟ್ಟ ಹಾಗೂ ಇತರೆ ನಿಧಿ ಹೊಂದಿದ್ದು, ಇದು ಬ್ಯಾಂಕಿನ ಆರ್ಥಿಕ ಸದೃಢತೆಗೆ ಸಾಕ್ಷಿಯಾಗಿದೆ ಎಂದು ಬ್ಯಾಂಕಿನ ಪ್ರಗತಿ ಅಂಕಿ–ಅಂಶಗಳನ್ನು ಸಭೆಯ ಮುಂದಿಟ್ಟರು.

ಬ್ಯಾಂಕ್ ಉಪಾಧ್ಯಕ್ಷ ಟಿ.ಎಸ್. ಜಯರುದ್ರೇಶ್, ಹಿರಿಯ ನಿರ್ದೇಶಕ ಹಾಗೂ ಡಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಕೋಗುಂಡಿ ಬಕ್ಕೇಶಪ್ಪ, ನಿರ್ದೇಶಕರುಗಳಾದ ಪಲ್ಲಾಗಟ್ಟೆ ಶಿವಾನಂದಪ್ಪ, ಶಿವಕುಮಾರ್ ದೇವರಮನೆ, ಅಜ್ಜಂಪುರ ಶೆಟ್ರು ವಿಜಯಕುಮಾರ್, ಅಂದನೂರು ಮುಪ್ಪಣ್ಣ, ಸುರೇಖಾ ಎಂ. ಚಿಗಟೇರಿ, ಕಂಚಿಕೇರಿ ಮಹೇಶ್, ಎ.ಆರ್. ಅರ್ಚನ, ಡಾ. ರುದ್ರಮುನಿ, ಸೋಗಿ ಮುರುಗೇಶ್, ವೃತ್ತಿಪರ ನಿರ್ದೇಶಕರುಗಳಾದ ಮುಂಡಾಸ್ ವೀರೇಂದ್ರ, ಮಲ್ಲಿಕಾರ್ಜುನ ಕಣವಿ ಸಮಾರಂಭದ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಶ್ರೀಮತಿ ಅನುಶ್ರೀ ಎಂ. ಚೌಕಿಪೇಟೆ ಪ್ರಾರ್ಥಿಸಿದರು. ಜಾನಪದ ಕಲಾವಿದರಾದ ಶ್ರೀಮತಿ ರುದ್ರಾಕ್ಷಿಬಾಯಿ ವಂದೇಮಾತರಂ ಮತ್ತು ನಾಡಗೀತೆ ಹಾಡಿದರು. ನಿರ್ದೇಶಕ ಹೆಚ್.ಎಂ. ರುದ್ರಮುನಿಸ್ವಾಮಿ ಸ್ವಾಗತಿಸಿದರು. ನಿರ್ದೇಶಕ ಎಂ. ಚಂದ್ರಶೇಖರ್ ವಂದಿಸಿದರು. ನಿರ್ದೇಶಕ ಇ.ಎಂ. ಮಂಜುನಾಥ ಕಾರ್ಯಕ್ರಮ ನಿರೂಪಿಸಿದರು. ಪ್ರಧಾನ ವ್ಯವಸ್ಥಾಪಕ ಬಿ.ಎಸ್. ಮಲ್ಲೇಶ್ ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದರು.

ಶ್ರೀ ಸುಬ್ರಮಣ್ಯೇಶ್ವರ ಕೋ–ಆಪರೇಟಿವ್ ಬ್ಯಾಂಕ್ : 56ನೇ ವಾರ್ಷಿಕ ಮಹಾಸಭೆ

ಬೆಂಗಳೂರು: ದಿನಾಂಕ:12.09.2026ರಂದು ಚಾಮರಾಜು ಕಲ್ಯಾಣ ಮಂದಿರದಲ್ಲಿ ಶ್ರೀ ಸುಬ್ರಮಣ್ಯೇಶ್ವರ ಕೋ–ಆಪರೇಟಿವ್ ಬ್ಯಾಂಕಿನ 2025–26ನೇ ಸಾಲಿನ 56ನೇ ವಾರ್ಷಿಕ ಮಹಾಸಭೆ ಜರುಗಿದ್ದು, ಈ ಸಂದರ್ಭದಲ್ಲಿ ಹಾಜರಿದ್ದ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಡಿ.ಆರ್.ವಿಜಯಸಾರಥಿಯವರು, ಪ್ರಧಾನ ವ್ಯವಸ್ಥಾಪಕರಾದ ಶ್ರೀ ಹರೀಶ್ ಬಿ.ಜೆ ರವರು, ಪೂರ್ಣ ಪ್ರಮಾಣದ ಸಲಹೆಗಾರರಾದ ಶ್ರೀ ಬಿ.ಆರ್.ನಾಗರಾಜರವರು, ಆಡಳಿತ ಮಂಡಳಿ ಸದಸ್ಯರು, ಬ್ಯಾಂಕಿನ ಸಿಬ್ಬಂದಿಗಳು ಹಾಗೂ ಬ್ಯಾಂಕಿನ ಸದಸ್ಯರು ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಡಿ.ಆರ್. ವಿಜಯಸಾರಥಿಯವರು ಮಾತನಾಡಿ, ಬ್ಯಾಂಕು 2025–26ನೇ ಸಾಲಿನಲ್ಲಿ ರೂ.453.26ಕೋಟಿಗಳಷ್ಟು ಠೇವಣಿ, ರೂ.291.40ಕೋಟಿಗಳಷ್ಟು ಸಾಲ ಮತ್ತು ಮುಂಗಡಗಳು, ರೂ.549.67 ಕೋಟಿಗಳಷ್ಟು ದುಡಿಯುವ ಬಂಡವಾಳ ಹೊಂದಿದ್ದು, ಸದಸ್ಯರುಗಳಿಗೆ ಡಿವಿಡೆಂಡ್ ಅನ್ನು ಘೋಷಿಸಿದರು.

ಪ್ರಗತಿ ಪಥದತ್ತ ದೈವಜ್ಞ ಸಹಕಾರ ಬ್ಯಾಂಕ್

ಬೆಳಗಾವಿ : 2025–26ರ ಸಾಲಿನಲ್ಲಿ ಕರ್ನಾಟಕ ಸಹಕಾರ ಶಿರೋಮಣಿ ಪ್ರಶಸ್ತಿ ಪಡೆದು, ಗ್ರಾಹಕ–ಸದಸ್ಯರ, ಠೇವಣಿದಾರರ ಭರವಸೆಗೆ ಹೆಸರುವಾಸಿಯಾದ ದೈವಜ್ಞ ಸಹಕಾರ ಬ್ಯಾಂಕ್ ನಿಯಮಿತ, ಬೆಳಗಾವಿ ಪ್ರಸಕ್ತ ಸಾಲಿನಲ್ಲಿ ಆಡಳಿತ ಮಂಡಳಿ, ಸದಸ್ಯರು ಹಾಗೂ ಸಿಬ್ಬಂದಿಗಳ ಸಹಕಾರದಿಂದ ಬ್ಯಾಂಕು ರೂ.3.78 ಕೋಟಿ ಲಾಭಗಳಿಸಿದ್ದು, ಆದಾಯಕರ ಹಾಗೂ ಇತರೆ ನಿಧಿಗಳಿಗೆ ಅನುವು ಮಾಡಿ ರೂ.2.05 ಕೋಟಿ ನಿವ್ವಳ ಲಾಭವನ್ನು ಗಳಿಸಿದೆ. ಬ್ಯಾಂಕಿನ 52ನೇ ವಾರ್ಷಿಕ ಸರ್ವ ಸಾಧಾರಣ ಸಭೆಯು ದಿನಾಂಕ : 06.09.2026ರಂದು ಜಗಜ್ಯೋತಿ ಬಸವೇಶ್ವರ ಕಲ್ಯಾಣ ಮಂಟಪ, ಶಹಾಪೂರ, ಬೆಳಗಾವಿಯಲ್ಲಿ ಸಂಪನ್ನಗೊಂಡ ಸಭೆಯಲ್ಲಿ ವಾರ್ಷಿಕ ವರದಿ ಮಂಡಿಸಿದರು. ಬ್ಯಾಂಕು 7949 ಸದಸ್ಯರನ್ನು ಹೊಂದಿದ್ದು, ರೂ.4.08 ಕೋಟಿ ಶೇರು ಬಂಡವಾಳ ಸಂಗ್ರಹಿಸಿದೆ, ಅದರಂತೆ ರೂ.308.73 ಕೋಟಿ ದುಡಿಯುವ ಬಂಡವಾಳ ಹೊಂದಿದೆ. ರೂ.274.95 ಕೋಟಿ ಠೇವಣಿಯೊಂದಿಗೆ ರೂ.193.63 ಕೋಟಿ ಸಾಲ ವಿತರಿಸಿದೆ.

ಈ ಸಂದರ್ಭದಲ್ಲಿ ವಾರ್ಷಿಕ ಸರ್ವ ಸಾಧಾರಣ ಸಭೆಯ ಅಧ್ಯಕ್ಷತೆ ವಹಿಸಿಕೊಂಡಿದ್ದ ಶ್ರೀ ರಾಜೇಶ ರಮಾಕಾಂತ ಅಣವೇಕರ ಅವರು ಬ್ಯಾಂಕಿನ ಸದಸ್ಯರು ಹಾಗೂ ಗ್ರಾಹಕರಿಗೆ ಬ್ಯಾಂಕಿನ ಹೊಸ ಶಾಖೆಗಳನ್ನು ತೆರೆಯುವ ಬಗ್ಗೆ ವಿವರಿಸಿದರು. ಅದರಂತೆ ಸದಸ್ಯರಿಗೆ ಪ್ರತಿ ವರ್ಷದಂತೆ ಶೇ.11% ಪ್ರಮಾಣದಲ್ಲಿ ಲಾಭಾಂಶ ನೀಡುವುದೆಂದು ಆಡಳಿತ ಮಂಡಳಿ ನಿರ್ಧರಿಸಿದೆ ಎಂದು ವಿವರಿಸಿದರು. ಬ್ಯಾಂಕಿನ ನಿವ್ವಳ ಎನ್.ಪಿ.ಎ ಪ್ರಮಾಣ ಶೇ.0.00 ಇದೆ. ಸಾಲ ಪಡೆದ ಸದಸ್ಯರು ಸಮಯಕ್ಕೆ ಸರಿಯಾಗಿ ಪಾವತಿಸಿ ಇನ್ನು ಹೆಚ್ಚಿನ ಪ್ರಗತಿಗೆ ಸಹಕರಿಸಬೇಕೆಂದರು. ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ ಶ್ರೀ ಪದ್ಮನಾಭ ಎಸ್. ಶೇಟರವರು ವಾರ್ಷಿಕ ವರದಿಯ ಸಂಪೂರ್ಣ ಮಾಹಿತಿಯನ್ನು ಸಭೆಯಲ್ಲಿ ಮಂಡಿಸಿದರು.

ಉಪಾಧ್ಯಕ್ಷರಾದ ಶ್ರೀ ಮಂಜುನಾಥ ಎಸ್. ಶೇಟ, ಆಡಳಿತ ಮಂಡಳಿಯ ಸದಸ್ಯರಾದ ಶ್ರೀ ಜೀವನ ಎಸ್. ವೆರ್ಣೇಕರ, ಶ್ರೀ ಉದಯ ಜಿ ರಾಯ್ಕರ, ಶ್ರೀ ಉದಯಶಂಕರ ಎನ್. ಭಟ್, ಶ್ರೀ ಜೀವನ ಡಿ. ವೆರ್ಣೇಕರ, ಶ್ರೀ ಮಾಣಿಕ (ಗಜಾನನ) ಎನ್. ಅಣವೇಕರ, ಶ್ರೀಮತಿ ವಿನಿತಾ ವಿ. ಶೇಟ, ಶ್ರೀ ರಘುನಾಥ ಎಚ್. ಶೇಜೆಕಾನ, ಶ್ರೀ ನಾಗೇಂದ್ರ ಎಮ್. ಪಾವುಸ್ಕರ, ಶ್ರೀ ಲಕ್ಷ್ಮೀಕಾಂತ ಎಸ್. ನೇತಲಕರ, ಶ್ರೀ ಸಂಜಯ ಆರ್. ರಾಯ್ಕರ, ಶ್ರೀಮತಿ ಅಂಜನಾ ಎಸ್. ರಾಯ್ಕರ್ ಹಾಗೂ ವ್ಯವಸ್ಥಾಪನಾ ಮಂಡಳಿಯ ಶ್ರೀ ಸದಾನಂದ ಎಮ್ ರೇವಣಕರ, ಶ್ರೀ ದಯಾನಂದ ಜಿ. ನೇತಲಕರ ಮತ್ತು ಶಾಖಾ ವ್ಯವಸ್ಥಾಪಕರು, ಬ್ಯಾಂಕಿನ ಸಿಬ್ಬಂದಿಗಳು, ಪಿಗ್ಮಿ ಸಂಗ್ರಹಕಾರರು, ಚಿನ್ನದ ಮೌಲ್ಯಮಾಪಕರು, ಬ್ಯಾಂಕಿನ ಸದಸ್ಯರು, ಠೇವುದಾರರು ಉಪಸ್ಥಿತರಿದ್ದರು. ಕೊನೆಯಲ್ಲಿ ಬ್ಯಾಂಕಿನ ನಿರ್ದೇಶಕರಾದ ಶ್ರೀ ಲಕ್ಷ್ಮೀಕಾಂತ ನೇತಲಕರ ಅವರು ವಂದನಾರ್ಪಣೆ ಸಲ್ಲಿಸಿದರು.

ದಿ ಯರಗಟ್ಟಿ ಅರ್ಬನ್ ಕೋ-ಆಫ್ ಕ್ರೆಡಿಟ್ ಬ್ಯಾಂಕಿನ 65ನೇ ವಾರ್ಷಿಕ ಸರ್ವಸದಸ್ಯರ ಸಭೆ : ರೂ.70.16 ಲಕ್ಷ ಲಾಭ

ಯರಗಟ್ಟಿ : ದಿನಾಂಕ : 23–08–2026 ರವಿವಾರದಂದು ದಿ ಯರಗಟ್ಟಿ ಅರ್ಬನ್ ಕೋ–ಆಫ್ ಕ್ರೆಡಿಟ್ ಬ್ಯಾಂಕಿನ 65ನೇ ವಾರ್ಷಿಕ ಮಹಾಸಭೆಯನ್ನು ಯರಗಟ್ಟಿಯ ಶ್ರೀ ಮಹಾಂತ ದುರದುಂಡಿಶ್ವರ ಮಠ ಯರಗಟ್ಟಿಯಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಮಹಾಂತೇಶ ಶಿವಲಿಂಗಪ್ಪ ಜಕಾತಿ ಇವರ ಘನ ಅಧ್ಯಕ್ಷತೆಯಲ್ಲಿ ನೆರವೇರಿತು. ಸದರಿ ವೇದಿಕೆಯಲ್ಲಿ ವಿಶೇಷ ಅತಿಥಿಗಳಾದ ಶ್ರೀ ಈಶ್ವರಚಂದ್ರ ಬೆಟಗೇರಿ ಸಾ॥ ಗೋಕಾಕ, ಉಪಾಧ್ಯಕ್ಷರಾದ ಶ್ರೀ ಹಣಮಂತ ಎಸ್. ಗಂಗರಡ್ಡಿ ಹಾಗೂ ನಿರ್ದೇಶಕರಾದ ಶ್ರೀ ಮಲ್ಲಿಕಾರ್ಜುನ್ ಡಿ. ಜಕಾತಿ, ಶ್ರೀ ಶಂಕರ ಎಸ್ ಬಾಳಿ, ಶ್ರೀ ಚಂದ್ರಶೇಖರ ಸಿ. ಹಾದಿಮನಿ, ಶ್ರೀ ಉಮೇಶ ವ್ಹಿ ಇಟ್ನಾಳ, ಶ್ರೀ ಮಹಾಂತೇಶ ಜಿ ತಾಂವಶಿ, ಶ್ರೀ ಭೀಮಶಿ ಎಸ್ ತಡಸಲೂರ, ಶ್ರೀ ಬಸವರಾಜ ಎಸ್ ಪಟ್ಟಣಶೆಟ್ಟಿ, ಶ್ರೀ ನಾಗಪ್ಪ ಬ ಚವಡಪ್ಪನವರ, ಶ್ರೀ ಶಂಕರ ಎ ದಂಡೆನ್ನವರ, ಶ್ರೀ ಫಕೀರಪ್ಪ ಎಚ್ ಕಾಮೋಶಿ, ಶ್ರೀಮತಿ ಸಾವಿತ್ರಿ ಎಸ್ ಯರಗಣವಿ ಹಾಗೂ ವೃತ್ತಿಪರ ನಿರ್ದೇಶಕರಾದ ಶ್ರೀ ಸೋಮಪ್ಪ ವ್ಹಿ ಕಳ್ಳಿಗುದ್ದಿ, ಶ್ರೀ ಎಸ್ ಎಮ್ ಬೋಳಿಶೆಟ್ಟಿ (ಸಿಎ) ಮತ್ತು ಬ್ಯಾಂಕಿನ ಆಡಳಿತ ಸಲಹೆಗಾರರಾದ ಶ್ರೀ ಬಾಪೂಜಿ ಎಮ್ ರಾಯರ ಹಾಗೂ ಬ್ಯಾಂಕಿನ ಪ್ರಭಾರ ವ್ಯವಸ್ಥಾಪಕರಾದ ಶ್ರೀ ಶಿವಲಿಂಗಪ್ಪ ಎ ಮೊರಬದ ಮತ್ತು ಸಿಬ್ಬಂದಿಗಳು ಹಾಜರಿದ್ದರು. ಬ್ಯಾಂಕು ಸನ್ 2025–26 ನೇ ಸಾಲಿನಲ್ಲಿ ರೂ 55.47 ಕೋಟಿ ಠೇವಣಿ, ರೂ 30.89 ಕೋಟಿ ಸಾಲವನ್ನು ನೀಡಿದ್ದು, ರೂ. 65.97 ಕೋಟಿ ದುಡಿಯುವ ಬಂಡವಾಳ, ರೂ. 70.16 ಲಕ್ಷ ನಿವ್ವಳ ಲಾಭ ಗಳಿಸಿ "ಶೂನ್ಯ" ನಿವ್ವಳ ಅನುತ್ಪಾದಕ ಸಾಲದ ಪ್ರಮಾಣದೊಂದಿಗೆ ಉತ್ತಮ ಪ್ರಗತಿ ಸಾಧಿಸಿದೆ. ಬ್ಯಾಂಕಿನ ಆಡಳಿತ ಮಂಡಳಿಯವರು ಬ್ಯಾಂಕಿನ ಸದಸ್ಯರಿಗೆ ಶೇ.12 ಡಿವಿಡೆಂಡ್ ಘೋಷಿಸಿರುತ್ತಾರೆ.

ಬ್ಯಾಂಕು ಪ್ರತಿ ವರ್ಷದಂತೆ ಕೊಡಮಾಡುವ ಪ್ರತಿ ಶಾಖೆಯಿಂದ 2 ಜನ ಉತ್ತಮ ಗ್ರಾಹಕರನ್ನು ಆಯ್ಕೆಮಾಡಿ ಸನ್ಮಾನಿಸಲಾಯಿತು ಹಾಗೂ ಎಸ್.ಎಸ್. ಎಲ್.ಸಿ. ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ತಲಾ ಮೂವರು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಗೌರವಿಸುವ ಮೂಲಕ ಮುಂದಿನ ದಿನಗಳಲ್ಲಿ ಇನ್ನಷ್ಟು ಉನ್ನತ ಸಾಧನೆ ಮಾಡಲು ಪ್ರೇರಣೆ ನೀಡುವುದು ಈ ಕಾರ್ಯಕ್ರಮದ ಉದ್ದೇಶವಾಗಿತ್ತು.

ನಿಮ್ಮ ಪ್ರಶ್ನೆ ನಮ್ಮ ಉತ್ತರ



ಸುಧಾಕರ್ ಭಟ್, ಬ್ಯಾಂಕಿಂಗ್ ಸಲಹೆಗಾರರು.

01. ಪಟ್ಟಣ ಸಹಕಾರ ಬ್ಯಾಂಕುಗಳು ಹಿಂದಿನ ಆರ್ಥಿಕ ವರ್ಷದ ಮಾರ್ಚ್ 31ರಂದು ಇರುವ ತಮ್ಮ ಒಟ್ಟು ಠೇವಣಿಗಳ ಶೇ.5 ಮತ್ತು ಶೇ.20ರಷ್ಟು ಗರಿಷ್ಠ ಮೊತ್ತವನ್ನು ಕ್ರಮವಾಗಿ ಯಾವುದಾದರೂ ಒಂದು ಬ್ಯಾಂಕು ಮತ್ತು ಎಲ್ಲಾ ಬ್ಯಾಂಕುಗಳಲ್ಲಿ ಒಟ್ಟು ಠೇವಣಿಗಳಲ್ಲಿ ಹೂಡಿಕೆ ಮಾಡಬಹುದಾಗಿದೆ. ಇತರೆ ಬ್ಯಾಂಕುಗಳಲ್ಲಿ ಹೂಡಿಕೆ ಮಾಡಬಹುದಾದ ಶೇ.5 ಮತ್ತು ಶೇ.20 ಗರಿಷ್ಠ ಮೊತ್ತವನ್ನು ಲೆಕ್ಕಹಾಕುವಲ್ಲಿ ಈ ಕೆಳಗಿನ ಹೂಡಿಕೆಯನ್ನು ಪರಿಗಣಿಸಬೇಕೇ?

(i.)ಭಾರತೀಯ ರಿಜರ್ವ್ ಬ್ಯಾಂಕಿನ ಚಾಲ್ತಿ ಖಾತೆಯಲ್ಲಿರುವ ಮೊತ್ತ.

(ii.) ಸಿ.ಆರ್.ಆರ್. ಗೋಸ್ಕರ ರಾಷ್ಟ್ರೀಕೃತ ಬ್ಯಾಂಕುಗಳ ಚಾಲ್ತಿ ಖಾತೆಗಳಲ್ಲಿ ಇಟ್ಟ ಮೊತ್ತ.

(iii.) ಎಸ್.ಎಲ್.ಆರ್. ಗೋಸ್ಕರ ಅಪೆಕ್ಸ್ ಬ್ಯಾಂಕ್‌ನಲ್ಲಿಟ್ಟ ಠೇವಣಿ.

ಈ ಬಗ್ಗೆ ಸ್ಪಷ್ಟೀಕರಣ ನೀಡಿ.

– ಪಟ್ಟಣ ಸಹಕಾರ ಬ್ಯಾಂಕ್ ಲಿ., ಬೆಂಗಳೂರು.

ಉತ್ತರ :

(i.) ಭಾರತೀಯ ರಿಜರ್ವ್ ಬ್ಯಾಂಕು ಸಾರ್ವಭೌಮ (Soureign)ನಿಯಂತ್ರಕ ಸಂಸ್ಥೆಯಾಗಿದ್ದು, ಅದರಲ್ಲಿ ಇಟ್ಟ ಠೇವಣಿಗಳು ಅಪಾಯ ಮುಕ್ತವಾಗಿರುವುದರಿಂದ, ಈ ಶಿಲ್ಕುಗಳನ್ನು ಅಂತರ್–ಬ್ಯಾಂಕ್ ಎಕ್ಸ್‌ಪೋಸರ್ ಮಿತಿಯ (Inter-bank exposure limit) ವ್ಯಾಪ್ತಿಯಿಂದ ಹೊರಗಿಡಲಾಗುತ್ತದೆ.

(ii.) ರಾಷ್ಟ್ರೀಕೃತ ಬ್ಯಾಂಕುಗಳೊಂದಿಗೆ ನಗದು ಮೀಸಲು ಅನುಪಾತ (CRR) ನಿರ್ವಹಣೆಗಾಗಿ ಇರಿಸಲಾದ ಮೊತ್ತವನ್ನು ಅಂತರ್–ಬ್ಯಾಂಕು ಎಕ್ಸ್‌ಪೋಸರ್ ಮಿತಿಯಿಂದ ಹೊರಗಿಡಲಾಗುವುದಿಲ್ಲ.

(iii.) ಅಪೆಕ್ಸ್ ಬ್ಯಾಂಕಿನಲ್ಲಿ ಇಟ್ಟ ಎಲ್ಲಾ ಠೇವಣಿಗಳು ಪಟ್ಟಣ ಸಹಕಾರ ಬ್ಯಾಂಕುಗಳ ಎಸ್‌ಎಲ್‌ಆರ್‌ನ ಭಾಗವಾಗಿರುವುದಿಲ್ಲ. ಸಿ.ಆರ್.ಆರ್. ಗಿಂತ ಹೆಚ್ಚುವರಿಯಾಗಿ ಅಪೆಕ್ಸ್ ಬ್ಯಾಂಕಿನ ಚಾಲ್ತಿ ಖಾತೆಯಲ್ಲಿರುವ ಮೊತ್ತ ಮಾತ್ರ ಎಸ್.ಎಲ್.ಆರ್ ಆಸ್ತಿಯಾಗಿ ಪರಿಗಣಿಸಲ್ಪಡುತ್ತದೆ. ಆದಾಗ್ಯೂ, ಅಪೆಕ್ಸ್ ಬ್ಯಾಂಕಿನ ಚಾಲ್ತಿ ಖಾತೆಯಲ್ಲಿರುವ ಮತ್ತು ಇತರ ಠೇವಣಿಯಲ್ಲಿರುವ ಮೊತ್ತವು ಅಂತರ್–ಬ್ಯಾಂಕ್ ಎಕ್ಸ್‌ಪೋಸರ್ ಮಿತಿಗಾಗಿ ಪರಿಗಣಿಸಲ್ಪಡುತ್ತದೆ.

ಚೈತನ್ಯ ಮಹಿಳಾ ಸಹಕಾರಿ ಬ್ಯಾಂಕ್ : 32ನೇ ವಾರ್ಷಿಕ ಸರ್ವ ಸಾಧಾರಣ ಸಭೆ

ವಿಜಯಪುರ : ಚೈತನ್ಯ ಮಹಿಳಾ ಸಹಕಾರಿ ಬ್ಯಾಂಕ ನಿ., ವಿಜಯಪುರ ಇದರ ಸನ್ 2025–26ನೇ ಸಾಲಿನ 32ನೇ ವಾರ್ಷಿಕ ಸರ್ವ ಸಾಧಾರಣ ಸಭೆಯನ್ನು ರವಿವಾರ ದಿನಾಂಕ : 20/09/2026 ರಂದು ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ಶ್ರೀಮತಿ ಮಲ್ಲಮ್ಮ ಶಿ. ಯಾಳವಾರ ರವರ ಅಧ್ಯಕ್ಷತೆಯಲ್ಲಿ ಜರುಗಿತು. ಸಭೆಗೆ ಆಗಮಿಸಿದ ಎಲ್ಲ ಸದಸ್ಯರಿಗೆ / ಗ್ರಾಹಕರಿಗೆ ಬ್ಯಾಂಕಿನ ಅಧ್ಯಕ್ಷರು ಸ್ವಾಗತ ಕೋರಿದರು.

ಅವರು ಮಾತನಾಡುತ್ತಾ ಸದರಿ ಬ್ಯಾಂಕು ದಿನಾಂಕ : 31/03/2026ಕ್ಕೆ ಇದ್ದಂತೆ ಒಟ್ಟು 12928 ಸದಸ್ಯರು, 25000 ಗ್ರಾಹಕರೊಂದಿಗೆ ರೂ.23208.52 ಲಕ್ಷ ದುಡಿಯುವ ಬಂಡವಾಳದ ಮೂಲಕ ರೂ.96997.33 ಲಕ್ಷ ವಾರ್ಷಿಕ ವಹಿವಾಟು ಮಾಡಿದ್ದು, ಬ್ಯಾಂಕು 11 ಶಾಖೆಗಳ ಮೂಲಕ ಒಟ್ಟು ರೂ.212.53 ಲಕ್ಷ ಆದಾಯ ಗಳಿಸಿದ್ದು ಈ ವರ್ಷ ರೂ. 145.39 ಲಕ್ಷ ನಿವ್ವಳ ಲಾಭ ಘೋಷಿಸಿದ್ದು ತನ್ನ ಸದಸ್ಯರಿಗೆ ಪ್ರತಿ ಶತ 6% ರಷ್ಟು ಲಾಭಾಂಶ ಹಂಚಲು ಸರ್ವ ಸದಸ್ಯರ ಅನುಮತಿ ಪಡೆಯಲಾಯಿತು.

ಸನ್ 2025–26ನೇ ಸಾಲಿನ ವಾರ್ಷಿಕ ವರದಿ ಮತ್ತು ಅಢಾವೆ ಪ್ರತಿಕೆಯನ್ನು ಶ್ರೀಮತಿ ಲಕ್ಷ್ಮೀ ಆರ್. ಬಳಗೊಂಡ ಪ್ರಧಾನ ವ್ಯವಸ್ಥಾಪಕರು ಓದಿ ಹೇಳಿದರು. ಬ್ಯಾಂಕಿನ ಸದಸ್ಯರ SSLC ಮತ್ತು PUC ಪ್ರತಿಭಾವಂತ ಮಕ್ಕಳಿಗೆ ಅಂಕಪಟ್ಟಿಯ ಆಧಾರದ ಮೇಲೆ ಎಲ್ಲಾ ಆಡಳಿತ ಮಂಡಳಿಯ ಸದಸ್ಯರಿಂದ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು ಹಾಗೂ ಪ್ರಥಮ ಬಹುಮಾನ ದೇವರಹಿಪ್ಪರಗಿ ಶಾಖೆಯ ವ್ಯವಸ್ಥಾಪಕರು ಮತ್ತು ಸಿಬ್ಬಂದಿ ವರ್ಗಕ್ಕೆ ಹಾಗೂ ದ್ವಿತೀಯ ಬಹುಮಾನ ಜಲನಗರ ಶಾಖೆಯ ವ್ಯವಸ್ಥಾಪಕರು ಮತ್ತು ಅವರ ಸಿಬ್ಬಂದಿ ವರ್ಗಕ್ಕೆ ಮತ್ತು ತೃತೀಯ ಬಹುಮಾನ ತಿಕೋಟಾ ಶಾಖೆಯ ವ್ಯವಸ್ಥಾಪಕರು ಮತ್ತು ಅವರ ಸಿಬ್ಬಂದಿ ವರ್ಗಕ್ಕೆ ಹಾಗೂ ಬ್ಯಾಂಕಿನ ವಸೂಲಾತಿ ಪ್ರಮಾಣವನ್ನು ಚೆನ್ನಾಗಿ ಮಾಡಿ ಬ್ಯಾಂಕಿನ ಅಭಿವೃದ್ಧಿಗೆ ಕಾರಣೀಭೂತರಾದ ಶ್ರೀಯುತ ಬಾಬುರಾವ ಟಿ. ರಾಠೋಡ ಮಾರಾಟಾಧಿಕಾರಿಗಳು ನಿಯಮ 441 ಮತ್ತು ಶ್ರೀಮತಿ ಅಶ್ವಿನಿ ಎಸ್. ಕಪಾಲಿ ಹಿರಿಯ ಸಹಾಯಕರು ಇವರಿಗೆ ಬಹುಮಾನ ನೀಡಿ ಪ್ರೋತ್ಸಾಹಿಸಲಾಯಿತು.

ಈ ಕಾರ್ಯಕ್ರಮವನ್ನು ಶ್ರೀಮತಿ ಪ್ರಭಾವತಿ ಎ ಪಾಟೀಲ ಅವರು ನಡೆಸಿಕೊಟ್ಟರು. ಸದರಿ ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ಮೈತ್ರಾ ಎಸ್. ಬಾಗೇವಾಡಿ ಇವರು ಮಾಡಿದರು. ಬಿ.ಎಲ್.ಡಿ. ರಸ್ತೆ ಶಾಖೆಯ ವ್ಯವಸ್ಥಾಪಕರಾದಂತ ಶ್ರೀಮತಿ ರೇಣುಕಾ ಎಸ್. ದೇಸಾಯಿ ಇವರು ವಂದನಾರ್ಪಣೆ ಮಾಡುವುದರ ಮೂಲಕ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಿದರು.

ಒನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
ಕುತೂಹಲಕಾರಿಯಾದ ಸುದ್ದಿಗಳು ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಮಧ್ಯ ಕಾಶ್ಮೀರದ ಬುಡ್ಗಾಂ ಜಿಲ್ಲೆಯ ಚಟ್ಟರ್ಗಮ್ ಗ್ರಾಮದಲ್ಲಿರುವ 650 ವರ್ಷಗಳಷ್ಟು ಹಳೆಯದಾದ 'ಚಿನಾರ್' ಮರವೊಂದು ಇಂದಿಗೂ ಹಸಿರಾಗಿಯೇ ಉಳಿದಿದ್ದು, ದೇಶದ ಅತ್ಯಂತ ಹಳೆಯ ಜೀವಂತ ಮರ ಎಂಬುದಕ್ಕೂ ಸಾಕ್ಷಿಯಾಗಿದೆ. ಮರದ ಒಣಗಿದ ಕೊಂಬೆಗಳು ಸ್ವಾಭಾವಿಕವಾಗಿ ಉದುರಿಹೋಗಿವೆಯಾದರೂ, ಉಳಿದ ಭಾಗವು ಹಸಿರಾಗಿಯೇ ಉಳಿದಿದೆ ಎಂದು ಜಮ್ಮು ಮತ್ತು ಕಾಶ್ಮೀರ ಸರ್ಕಾರ ಹೇಳಿದೆ.
- ಉತ್ತರ ಕರ್ನಾಟಕದ ಹೆಬ್ಬಾಗಿಲು ಹಾವೇರಿ ಜಿಲ್ಲೆಯು ಕನಕದಾಸರು, ಷರೀಫರು, ವಿ.ಕೃ. ಗೋಕಾಕ್, ಗಳಗನಾಥರು ಸೇರಿ ಹಲವು ಮಹಾನ್ ಸಾಹಿತ್ಯದ ವ್ಯಕ್ತಿಗಳಿಗೆ ಜನ್ಮ ನೀಡಿದ ಜಿಲ್ಲೆ. ಇಲ್ಲಿನ ಜನರಲ್ಲಿ ಓದುವ ಹವ್ಯಾಸ ಹೆಚ್ಚಿಸಲು ಕನ್ನಡ ಪುಸ್ತಕ ಪ್ರಾಧಿಕಾರವು ಮನೆಗೊಂದು ಗ್ರಂಥಾಲಯ ಅಭಿಯಾನ ಆರಂಭಿಸಿದ್ದು, ಅಲೆಮಾರಿ ಸಮುದಾಯದ ಸುಡುಗಾಡು ಸಿದ್ದರು ವಾಸವಿರುವ ಗುಡಿಸಲಿನಲ್ಲೂ ಗ್ರಂಥಾಲಯ ಸ್ಥಾಪಿಸಲಾಗಿದೆ.
- ಜಾರ್ಖಂಡ್‌ನ ರಾಂಚಿಯ ಮದ್ಯದಂಗಡಿವೊಂದಕ್ಕೆ ನುಗ್ಗಿದ ಕೋತಿಯೊಂದು ಕೈಗೆ ಸಿಕ್ಕ ಬಾಟಲಿಯಲ್ಲಿನ ಮದ್ಯವನ್ನು ಕಂಠಪೂರ್ತಿ ಕುಡಿದು ಬಳಿಕ ಅಂಗಡಿಯಲ್ಲೇ ಮಲಗಿ ನಿದ್ರೆಗೆ ಜಾರಿದೆ. ಕೋತಿ ಅಂಗಡಿಯೊಳಗೆ ಇರುವುದನ್ನು ಗಮನಿಸಿದ ರಕ್ಷಣಾ ತಂಡ ಕೋತಿಯನ್ನು ಸುರಕ್ಷಿತವಾಗಿ ರಕ್ಷಿಸಿದೆ.
- ಕೇರಳಂ ರಾಜ್ಯದ ಕಣ್ಣೂರು ಜಿಲ್ಲೆಯ ಚಕ್ಕರಕ್ಕಲ್ಲಿ ಮಾರಾಟವಾಗಿದ್ದ ರೂ. 500 ಬೆಲೆಯ ತಿರುವೋಣಂ ಬಂಪರ್ ಲಾಟರಿ ಟಿಕೆಟ್‌ಗೆ ರೂ.30 ಕೋಟಿಗಳ ಪ್ರಥಮ ಬಹುಮಾನ ಬಂದಿದೆ. 20 ಜನ ವಿಜೇತರಿಗೆ ತಲಾ ರೂ.1 ಕೋಟಿಗಳ ದ್ವಿತೀಯ ಬಹುಮಾನವನ್ನು ಮತ್ತು 20 ಜನ ವಿಜೇತರು ತಲಾ ರೂ. 25 ಲಕ್ಷಗಳ ತೃತೀಯ ಬಹುಮಾನವನ್ನು ಪಡೆಯಲಿದ್ದಾರೆ ಎಂದು ವರದಿಯಾಗಿದೆ.
- ಬೆಳಗಾವಿ ಜಿಲ್ಲೆಯ ರಾಯಭಾಗ ತಾಲೂಕಿನ ಇಟ್ನಾಳ ಗ್ರಾಮದ ಸಿದ್ದು ಗೂಡೋಡಗಿ ಅವರು ಬ್ಯಾಂಕಿನಿಂದ ಸಾಲ ಪಡೆದು, ಪರಿಸರ ಸ್ನೇಹಿ ಪೇಪರ್ ಬ್ಯಾಗ್ ತಯಾರಿಕಾ ಉದ್ಯಮ ಆರಂಭಿಸಿ, ಸ್ಥಳೀಯ 20,000 ಗ್ರಾಹಕರ ಸಂಪರ್ಕ ಸಾಧಿಸಿ, ಯಶಸ್ವಿ ಉದ್ಯಮಿಯಾಗಿ ಹೊರ ಹೊಮ್ಮಿದ್ದಾರೆ. ಕೇವಲ 1000 ದಿಂದ ಆರಂಭವಾದ ವ್ಯವಹಾರ ಇಂದು 40,000ಕ್ಕೂ ಹೆಚ್ಚು ಬ್ಯಾಗ್ ತಯಾರಿಸುವ ಮಟ್ಟಕ್ಕೆ ಬೆಳೆದಿದೆ.

ಓದುಗರ ಅನಿಸಿಕೆ...

ಗ್ರಾಹಕರಿಂದ ವಸೂಲಿ : ಇನ್ಮುಂದೆ ಯುಪಿಐ ಮೂಲಕ ಮಾಡುವ ಹೆಚ್ಚಿನ ಮೌಲ್ಯದ ವಾಣಿಜ್ಯ ವಹಿವಾಟುಗಳಿಗೆ ವರ್ತಕರ ಮೇಲೆ ಶೇ.0.4 ರಷ್ಟು ಮರ್ಚೆಂಟ್ ಶುಲ್ಕ ವಿಧಿಸಲು ನಿರ್ಧರಿಸಲಾಗಿದ್ದು, ವರ್ತಕರು ಈ ಶುಲ್ಕವನ್ನು ಗ್ರಾಹಕರಿಂದ ವಸೂಲಿ ಮಾಡುವಂತಿಲ್ಲ ಎಂದು ಕೇಂದ್ರ ಸರ್ಕಾರ ತಿಳಿಸಿದೆಯಾದರೂ, ವರ್ತಕರು ಕೊನೆಗೆ ಅದನ್ನು ಬೇರೊಂದು ರೂಪದಲ್ಲಿ ಗ್ರಾಹಕರಿಂದ ವಸೂಲಿ ಮಾಡಿಕೊಳ್ಳುತ್ತಾರಷ್ಟೇ.

ಅರುಣ್ ಜಾದವ್, ಕಲಬುರಗಿ

ಅಪಾರ ಸಂತಸವಾಯಿತು : 1997ರಲ್ಲಿ ಆರಂಭಗೊಂಡ ನಮ್ಮೂರಿನ ಬೀಳಗಿ ಪಟ್ಟಣ ಸಹಕಾರಿ ಬ್ಯಾಂಕು ಇದೀಗ ರೂ. 1,021 ಕೋಟಿಗೂ ಅಧಿಕ ದುಡಿಯುವ ಬಂಡವಾಳ ಹೊಂದಿದ್ದು, ಮುಂದಿನ ದಿನಗಳಲ್ಲಿ ಶೆಡ್ಯೂಲ್ ಬ್ಯಾಂಕ್ ಆಗುವ ಗುರಿಯೊಂದಿಗೆ ಮುನ್ನಡೆಯುತ್ತಿದೆ ಎನ್ನುವುದನ್ನು ತಿಳಿದು ಅಪಾರ ಸಂತಸವಾಯಿತು. ಸಂಸ್ಥಾಪಕ ಅಧ್ಯಕ್ಷ ಎಸ್.ಆರ್. ಪಾಟೀಲರಿಗೂ ಹಾಗೂ ಆಡಳಿತ ಮಂಡಳಿಯ ಎಲ್ಲ ಸದಸ್ಯರಿಗೂ ಧನ್ಯವಾದಗಳು.

ಶಿವಾನಂದ ಪಾಟೀಲ ಎಂ.ಆರ್., ಬಾಗಲಕೋಟೆ

ಸಂಪಾದಕರು :
ಪುಂಡಲೀಕ ಎನ್. ಕೇರೂರೆ,
ಮುಖ್ಯಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ
ಮಹಾಮಂಡಳ ನಿ., ಬೆಂಗಳೂರು.

ಇವರಿಗೆ,

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, #35, 3rd Cross, Sudhamanagar, Bangalore - 560027.